ಮೂಲ ದಾವಾ ನಂ. 13/2017

ಪಿ. ಡಬ್ಲುಃ 1

ಸಾಕ್ಷಿಯನ್ನು ದಿನಾಂಕ: 17-06-2022 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಸ್. ಜಿ. ಎಚ್. ವಕೀಲರಿಂದಃ**

ದಾವಾ ಆಸ್ತಿಗಳು ನನ್ನ ಪಿರ್ತಾರ್ಜಿತ ಆಸ್ತಿಗಳಾಗಿರುತ್ತವೆ . ಸಾಕ್ಷಿ ಮುಂದುವರೆದು ನನ್ನ ಅಜ್ಜನಿಂದ ನನಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಅಜ್ಜನ ಹೆಸರು ಗಣೇಶ ಶಂಭು ಹೆಗಡೆ. ಅವರಿಗೆ ಒಬ್ಬನೇ ಮಗನಿರುತ್ತಾನೆ. ನನ್ನ ತಂದೆ ಮೃತಪಟ್ಟು 20 ರಿಂದ 21 ವರ್ಷಗಳಾಯಿತು. ಸಾಕ್ಷಿ ಮುಂದುವರೆದು ಅವರು 2001 ರಲ್ಲಿ ಮೃತಪಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ಮೃತಪಟ್ಟ ನಂತರ ದಾವಾ ಆಸ್ತಿಗಳು ನನ್ನ ತಾಯಿಯ ಹೆಸರಿಗೆ ಬಂದಿರುತ್ತವೆ. ನನ್ನ ತಂದೆಗೆ 1 ಎಕರೆ 14 ಗುಂಟೆ ಆಸ್ತಿಯಿರಬಹುದು. ಅವೆಲ್ಲ ಬೇರೆ ಬೇರೆ ಕಡೆ ಇವೆ . ಅವು 6 ಕಂಪೌಂಡ್ ಗಳಲ್ಲಿ ಇರಬಹುದು. ದಾವಾ ಆಸ್ತಿಯಲ್ಲಿ ನಮಗೆ ಸೇರಿದ ಮನೆ ಇದೆ. ಸರ್ವೆ ನಂ. 74 ರಲ್ಲಿ ಒಟ್ಟೂ 5-6 ಹಿಸ್ಸೆಗಳಿರಬಹುದು. ನಮ್ಮ ಜಾಗವನ್ನು ನಾನು ಸರ್ವೆ ಮಾಡಿಸುವ ಪ್ರಸಂಗ ಬಂದಿರುವುದಿಲ್ಲ. ನನ್ನ ಜಾಗದ ಚೆಕ್ ಬಂದಿ ನನಗೆ ಗೊತ್ತಿದೆ. ಸಾಕ್ಷಿ ಮುಂದುವರೆದು ಅದರಲ್ಲಿ ನಮ್ಮ ಅಜ್ಜನ ಕಾಲದಿಂದಲೂ ಸ್ವಾದೀನತೆಯಲ್ಲಿದ್ದೇವೆ ಎಂದು ನುಡಿಯುತ್ತೇವೆ. ನಿಮ್ಮ ಅಜ್ಜ ಸರ್ವೆ ನಂ. 74/ 4 ಬ ದಲ್ಲಿ 1 ಗುಂಟೆ ಜಾಗವನ್ನು ಪಂಚಾಯತಿಗೆ ಬಾವಿಗಾಗಿ ನೀಡಿದ ವಿಚಾರ ಗೊತ್ತಾ ಅಂದರೆ ಸಾಕ್ಷಿ ನಾನು ಕೇಳಿರುತ್ತೇನೆ ಎಂದು ನುಡಿಯುತ್ತಾರೆ . ಸದ್ರಿ 1 ಗುಂಟೆ ಜಾಗ ಸರ್ವೆ ನಂ. 74/4 ಬ ಯಾವ ದಿಕ್ಕಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ದಾಖಲೆಗಳನ್ನು ನಾನು ನೋಡಿರುತ್ತೇನೆ. ಸರ್ವೆ ನಂ. 74/4 ಬ ದ 9 ಗುಂಟೆ ಜಾಗದಲ್ಲಿ 1 ಗುಂಟೆ ಜಾಗ ಪಂಚಾಯತ ಹೆಸರಿನಲ್ಲಿದೆ ಎಂದರೆ ಸರಿ. ಸದ್ರಿ 1 ಗುಂಟೆ ಜಾಗ ಪಂಚಾಯತ ಹೆಸರಿಗೆ ಹೇಗೆ ಬಂತು ಎಂದು ನನಗೆ ಗೊತಿಲ್ಲ. ಸದ್ರಿ 1 ಗುಂಟೆ ಜಾಗದಲ್ಲಿ ಸರ್ಕಾರಿ ಬಾವಿ ತೋಡಲು ನನ್ನ ಅಜ್ಜ ಪಂಚಾಯತಿಗೆ ಬಕ್ಷೀಸನ್ನು ನೀಡಿರುತ್ತಾರೆ ಎಂದರೆ ಸಾಕ್ಷಿ ನಾನು ಆ ಬಗ್ಗೆ ಕೇಳಿರುತ್ತೇನೆ ಎಂದು ನುಡಿಯುತ್ತಾರೆ. ಇದುವರೆಗೂ ನನಗೆ ಸೇರಿದ ಆಸ್ತಿ ಮತ್ತು ಪಂಚಾಯತಿಗೆ ಸೇರಿದ ಆಸ್ತಿಗಳು ಪೋಡಿ ಆಗಿರುವುದಿಲ್ಲ ಎಂದರೆ ಸರಿ. ಸದ್ರಿ 1 ಗುಂಟೆ ಜಾಗ ಪ್ರತಿವಾದಿ ಮನೆಯ ಉತ್ತರಕ್ಕೆ ಬರುತ್ತದೆ ಎಂದರೆ ಸಾಕ್ಷಿ ಹಿಂದುಗಡೆ ಬರುತ್ತದೆ ಎಂದು ನುಡಿದು ನಂತರ ಆಗಿರಬಹುದು ಎಂದು ನುಡಿಯುತ್ತಾರೆ . ಸದ್ರಿ ಬಾವಿಯಿಂದ ಸಾರ್ವಜನಿಕರು ಮತ್ತು ಪ್ರತಿವಾದಿ ಬಂದು ನೀರನ್ನು ತೆಗೆದು ಉಪಯೋಗಿಸುತ್ತಿದ್ದಾರೆ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರೆದು ಸದ್ರಿ ಬಾವಿಯಲ್ಲಿ ನೀರು ಇರುವುದಿಲ್ಲ ಎಂದು ನುಡಿಯುತ್ತಾರೆ. ಬಾವಿಯ ನೀರನ್ನು ಉಪಯೋಗಿಸಲು ನಾನು ತೊಂದರೆ ಕೊಡುತ್ತಿದ್ದೇನೆ ಎಂದು ಪ್ರತಿವಾದಿ ನನ್ನ ವಿರುದ್ಧ ಪಂಚಾಯತಿಗೆ ಅನೇಕ ದೂರನ್ನು ಕೊಟ್ಟಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ.

ದಾವಾ ಆಸ್ತಿಯಲ್ಲಿ 1 ಗುಂಟೆ ಆಸ್ತಿ ಪಂಚಾಯತಿಯದ್ದು ಎಂದು ನಮೂದಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ 1 ಮತ್ತು 2 ನೇ ಆಸ್ತಿಗಳು ಒಂದಕ್ಕೊಂದು ಹೊಂದಿಕೊಂಡಿವೆ. ಪರಿಶಿಷ್ಟ ಆಸ್ತಿಯ ಕುರಿತು ಗಡಿಗಳನ್ನು ನಮ್ಮ ಆಸ್ತಿಯ ಸುತ್ತಲೂ ಇರುವ ಕಲ್ಲು ಮತ್ತು ಸ್ವಂತ ಅನುಭವದ ಆಧಾರದ ಮೇಲೆ ತಿಳಿಸಿರುತ್ತೇನೆ. ಪ್ರತಿವಾದಿಗೆ ಸೇರಿದ 74/5 ರ ಆಸ್ತಿ ನನ್ನ ಆಸ್ತಿಯ ದಕ್ಷಿಣಕ್ಕೆ ಇದೆ ಎಂದರೆ ಇರಬಹುದು. ಸದ್ರಿ ಸರ್ವೆ ನಂ . 74/5 ರ 4 ಗುಂಟೆ ಆಸ್ತಿಯ ಕುರಿತು ಸ್ವಾದೀನತೆ ಮತ್ತು ಪ್ರತಿವಾದಿ ಅನುಭವಿಸಿಕೊಂಡು ಬರಲು ನನ್ನದು ಯಾವದೇ ತಕರಾರು ಇರುವುದಿಲ್ಲ. ಪ್ರತಿವಾದಿ ತನಗೆ ಸೇರಿದ ಆಸ್ತಿಯ ಗಡಿಯ

ಬೇಲಿಯನ್ನು ರಿಪೇರಿ ಮಾಡಲು ನನ್ನದು ತಕರಾರು ಇರುವುದಿಲ್ಲ ಎಂದರೆ ಸಾಕ್ಷಿ ಈ ದಾವೆ ನ್ಯಾಯಾಲಯದಲ್ಲಿ ಇರುವ ಕಾರಣ ಅದನ್ನು ಮಾಡಲು ಬರುವುದಿಲ್ಲ ಎಂದು ನುಡಿಯುತ್ತಾರೆ.

ಹೊಸಾಕುಳಿಯಿಂದ ಗೌಡರಕೇರಿಯಿಂದ ಲಕ್ಷ್ಮೀನಾರಾಯಣ ದೇವಸ್ಥಾನಕ್ಕೆ ಹೋಗಲು ಕಾಲು ದಾರಿ ಇದೆ . ಸದ್ರಿ ಕಾಲು ದಾರಿ ನನ್ನ ಮತ್ತು ಪ್ರತಿವಾದಿಯ ಜಾಗದಲ್ಲಿ ಹಾದು ಹೋಗುತ್ತದೆ ಎಂದರೆ ಸಾಕ್ಷಿ ಸಧ್ಯ ನನ್ನ ಜಾಗದಲ್ಲಿ ಹಾದು ಹೋಗುತ್ತದೆ ಎಂದು ನುಡಿಯುತ್ತಾರೆ. ಅದು ಕಾಲು ದಾರಿಯಾದ ಕಾರಣ ಅದು ಯಾವದೇ ರಕ್ಷಣೆಯನ್ನು ಹೊಂದಿರುವುದಿಲ್ಲ. ನಮ್ಮ ಮನೆಯ ಎಡಕ್ಕೆ ಪಾಗಾರ ಇದೆ, ಮನೆಯ ಬಲಕ್ಕೆ ಹಳ್ಳ ಇದೆ, ಮನೆಯ ಹಿಂದೆ 2-3 ಅಡಿ ಎತ್ತರದಲ್ಲಿ ಮಣ್ಣಿನ ದಿಬ್ಬ ಇದೆ. ಪ್ರತಿವಾದಿಯ ಜಾಗ ನನ್ನ ಮನೆಯ ಯಾವ ದಿಕ್ಕಿನಲ್ಲಿದೆ ಎಂದರೆ ಸಾಕ್ಷಿ ನಮ್ಮ ಮನೆಯ ಎದುರುಗಡೆ ಇದೆ ಎಂದು ನುಡಿಯುತ್ತಾರೆ. ನಮ್ಮ ಮನೆ ಮತ್ತು ಪ್ರತಿವಾದಿಯ ಸ್ಥಳದ ಮಧ್ಯೆ ಏನು ಇದೆ ಎಂದರೆ ಸಾಕ್ಷಿ ನಮ್ಮ ಮನೆ ಎತ್ತರದಲ್ಲಿದೆ ಪ್ರತಿವಾದಿಯ ಜಾಗ ಕೆಳಗಡೆ ಇದೆ ಎಂದು ನುಡಿಯುತ್ತಾರೆ . ನಮ್ಮ ಮನೆ ಪ್ರತಿವಾದಿಯ ಜಾಗಕ್ಕಿಂತ ಎತ್ತರದಲ್ಲಿದೆ ಎಂದರೆ ಸರಿ.

ಪ್ರತಿವಾದಿ ತನ್ನ ಸ್ಥಳವನ್ನು ಸರ್ವೆ ಮಾಡಿಸಲು ಮೋಜಣಿ ದಾರರಿಗೆ ಅರ್ಜಿಯನ್ನು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ಸ್ಥಳದಲ್ಲಿ ಉತ್ತರದ ಭಾಗದಿಂದ ಎತ್ತರವಾಗುತ್ತಾ ಹೋಗುತ್ತದೆ ಎಂದರೆ ಸರಿಯಲ್ಲ. ನನ್ನ ಜಾಗದ ನಾಲ್ಕೂ ದಿಕ್ಕಿನ ಉದ್ದ ಅಗಲವನ್ನು ಹೇಳಲು ಆಗುವುದಿಲ್ಲ . ನನಗೆ ಸೇರಿದ ಜಾಗವನ್ನು ನಾನು ಯಾವತ್ತೂ ಅಳತೆ ಮಾಡಿಸಿರುವುದಿಲ್ಲ. ಪ್ರತಿವಾದಿಯ ತಂದೆ ನನ್ನ ತಂದೆ ತಾಯಿಯ ಮೇಲೆ ಒಂದು ದಾವೆಯನ್ನು ಹೂಡಿದ್ದರು ಎಂದರೆ ಸರಿ . ಅದರಲ್ಲಿ ಅವರಿಗೆ ಸೇರಿದ ಆಸ್ತಿಯ ಗಡಿ ರಿಪೇರಿ ಮಾಡಲು ತಕರಾರು ಮಾಡಬಾರದು ಎಂದು ಹೂಡಿದ್ದರು ಎಂದರೆ ಸಾಕ್ಷಿ ಅದು ಸುಳ್ಳು ದಾವೆಯಾಗಿತ್ತು ಎಂದು ನುಡಿಯುತ್ತಾರೆ. ನಾವು ಗಡಿಗೆ ತಕರಾರು ಮಾಡುವುದಿಲ್ಲ ಎಂದು ಹೇಳಿದ ಕಾರಣ ಅವರು ಸದ್ರಿ ದಾವೆಯನ್ನು ವಾಪಸು ಪಡೆದಿರುತ್ತಾರೆ ಎಂದರೆ ಸಾಕ್ಷಿ ಅದಕ್ಕೆ ನನ್ನ ತಾಯಿ ಒಪ್ಪಿರುವುದಿಲ್ಲ ಎಂದು ನುಡಿಯುತ್ತಾರೆ.

ನಮ್ಮ ಆಸ್ತಿಗೆ ಗಡಿ ಕಲ್ಲು ಇದೆಯಾ ಎಂದರೆ ಸಾಕ್ಷಿ ಅದನ್ನು ನಾಶ ಮಾಡಿರುತ್ತಾರೆ ಆದ್ದರಿಂದ ನಾನು ದೂರನ್ನು ನೀಡಿದ್ದೇನೆ ಎಂದು ನುಡಿಯುತ್ತಾರೆ. ಆ ಕುರಿತು ನಾನು ಸರ್ವೆ ಮಾಡಿಸಲು ಪ್ರಯತ್ನಪಟ್ಟಿರುವುದಿಲ್ಲ. ದಾವಾ ಸ್ಥಳದ ನಕಾಶೆಯನ್ನು ನೋಡಿರುತ್ತೇನೆ. ಪ್ರತಿವಾದಿ ಹಾಜರುಪಡಿಸಿರುವ ನಕಾಶೆಯನ್ನು ನಾನು ನೋಡಿರುವುದಿಲ್ಲ. ಈ ದಾವೆ ದಾಖಲಿಸುವಾಗ ನ್ಯಾಯಾಲಯಕ್ಕೆ ನಾನು ನಕಾಶೆಯನ್ನು ಹಾಜರುಪಡಿಸಿರುವುದಿಲ್ಲ . ನಕಾಶೆಯನ್ನು ನೋಡಿದರೆ ಅದರಲ್ಲಿ ವಾದಿ ಮತ್ತು ಪ್ರತಿವಾದಿಯರ ಆಸ್ತಿ ಒಂದೇ ಸಮತಟ್ಟಾಗಿರುವುದು ಕಂಡು ಬರುತ್ತದೆ ಎಂದರೆ ಸಾಕ್ಷಿ ನಕಾಶೆಯಲ್ಲಿ ತಗ್ಗು ಉಬ್ಬು ಕಂಡುಬರುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ. 74/4 ಮತ್ತು 74/5 ಯಾವ ಪಾತಳಿಯಲ್ಲಿದೆ ಎಂದು ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿ ಸುಮಾರು 8 ಅಡಿ ಎತ್ತರದಲ್ಲಿದೆ ಎಂದು ನುಡಿಯುತ್ತಾರೆ. ಪ್ರತಿವಾದಿ ಸ್ಥಳದ ಉತ್ತರ ಭಾಗ ಮತ್ತು ದಾವಾ ಸ್ಥಳ ಒಂದೆ ಸಮತಟ್ಟಾಗಿವೆ ಎಂದರೆ ಸರಿಯಲ್ಲ . ಪ್ರತಿವಾದಿ ಅವರ ಜಾಗದ ಉತ್ತರ ಭಾಗದಲ್ಲಿ ಸಾಲಾಗಿ 6 ತೆಂಗಿನ ಮರಗಳನ್ನು ಹೊಂದಿರುತ್ತಾನೆ ಎಂದರೆ ಸರಿಯಲ್ಲ. ಪ್ರತಿವಾದಿ ತನ್ನ ಜಾಗದಲ್ಲಿ ಮನೆ ಕಟ್ಟಲು ಮಣ್ಣನ್ನು ತೆಗೆದಿದ್ದು ನಾನು ಅದರ ಆಧಾರದ ಮೇಲೆ ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ . ನನ್ನ ಜಾಗದ ದಕ್ಷಿಣ ಗಡಿ ಮತ್ತು ಪ್ರತಿವಾದಿ ಜಾಗದ ಉತ್ತರ ಗಡಿ ಒಂದೇ ಸಮತಟ್ಟಾಗಿವೆ ಎಂದರೆ ಸರಿಯಲ್ಲ. ಪ್ರತಿವಾದಿ ಸರ್ವೆ ಮಾಡಿಸಿದ್ದು ಗೊತ್ತಿದ್ದರೂ ಸಹಾ ನಾನು ಈ ದಾವೆಯಲ್ಲಿ ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಅಜ್ಜ ಪಂಚಾಯತಿಗೆ 1 ಗುಂಟೆ ಜಾಗವನ್ನು ಕೊಟ್ಟ ಮೇಲೆ ನಮ್ಮ ಜಾಗವನ್ನು ಸರ್ವೆ ಮಾಡಿ ಗಡಿ ಗುರುತಿಸಿರುತ್ತಾರೆ ಎಂದರೆ ಸರಿಯಲ್ಲ . ಪಂಚಾಯತಿ ಬಾವಿಯ ನೀರನ್ನು ಉಪಯೋಗಿಸಲು ಬರುವವರನ್ನು

ಹೆದರಿಸಲು ಷದ್ರಿ ಜಾಗ ನನ್ನದು ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಲ್ಲಿ ಪಂಚಾಯತಿ ಬಾವಿ ಇಲ್ಲ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.